ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 02.07.2026.

**ಮುಂದುವರೆದ ಪಾಟೀ ಸವಾಲು – 1 ರಿಂದ 3 ನೇ ಪ್ರತಿವಾದಿ ಪರಃ ಶ್ರೀ. ಕೆ. ಎಸ. ಎನ. ವಕೀಲರಿಂದಃ**

ಹೆಣ್ಣು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡದೇ ಇದ್ದರೆ ಈ ದಾವೆ ನಡೆಯುವುದಿಲ್ಲಾ ಅಂದರೆ ಸರಿಯಲ್ಲಾ. ಹದ್ದುಬಸ್ತು ಮಾಡದೇ ಇರುವ ಕಾರಣ ಈ ದಾವೆ ಕಾಯ್ದೆ ಶೀರ ಇರುವುದಿಲ್ಲಾ ಅಂದರೆ ಸರಿಯಲ್ಲಾ. ಉತ್ತರ ದಕ್ಷಿಣ 35 ಪೂಟ್, 6 ಪೂರ್ವ ಪಶ್ಚಿಮ ಅತೀಕ್ರಮಣ ಮಾಡಿರುತ್ತಾರೆ. ಸದರಿ ಅಳತೆಯನ್ನು ಯಾವ ಆದಾರದ ಮೇಲೆ ಬರೆಸಿರುತ್ತೀರಿ ಎಂದರೆ ಅಳತೆ ಮಾಡಿರುತ್ತೇವೆ ಎನ್ನುತ್ತಾರೆ. ಪ್ರತಿವಾದಿಗಳು ಕಂಪೌಂಡ ಕಟ್ಟಿದ್ದು ಒಳಗೆ ಹೋಗಿ ಅಳತೆ ಮಾಡಿರುತ್ತೀರಾ ಎಂದರೆ ಅದಕ್ಕೂ ಪೂರ್ವದಲ್ಲಿ ಅಳತೆ ಮಾಡಿರುತ್ತೇವೆ ಎನ್ನುತ್ತಾರೆ. ಅಳತೆಯನ್ನು ಇತ್ತೀಚೆಗೆ ಮಾಡಿರುತ್ತೇವೆ ಮತ್ತು ನಮ್ಮ ತಂದೆಯವರ ಕಾಲದಲ್ಲೂ ಮಾಡಿರುತ್ತೇವೆ. ಕೊನೆಯ ಬಾರಿ ಈ ದಾವೆ ಮಾಡುವ ಪೂರ್ವದಲ್ಲಿ ಮಾಡಿರುತ್ತೇವೆ. ಆ ಸಮಯದಲ್ಲಿ ಪ್ರತಿವಾದಿಗಳು ಕಂಪೌಂಡ ಕಟ್ಟಿದ್ದರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಕಂಪೌಂಡ ಒಳಗೆ ಹೋಗಿ ಅಳತೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಪ್ರತಿವಾದಿ 1 ರಿಂದ 3 ರವರು ಯಾವುದೇ ಅತೀ ಕ್ರಮಣ ಮಾಡದೇ ಇದ್ದರು ಹಾಗೂ ನೀವು ಅಳತೆ ಮಾಡದೆ ಇದ್ದರೂ ಸಹ ಈ ದಾವೆಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತೀದ್ದಿರಿ ಎಂದರೆ ಸರಿಯಲ್ಲಾ. ನೀವು ಹೇಳಿದ ರೀತಿ ಉತ್ತರ ದಕ್ಷಿಣ 35 ಪೂಟ್, 6 ಪೂರ್ವ ಪಶ್ಚಿಮ ಪ್ರತಿವಾದಿಗಳು ಅತೀಕ್ರಮಣ ಮಾಡಿರುವುದಿಲ್ಲಾ ಅಂದರೆ ಸರಿಯಲ್ಲಾ. ಸಾಕ್ಷಿಗೆ ಪ್ರತಿವಾದ ಪತ್ರದೊಂದಿಗೆ ಸಲ್ಲಿಸಿದ ನಕಾಶೆಯನ್ನು ತೋರಿಸಿದ್ದು ಸದರಿ ನಕಾಶೆಯಲ್ಲಿ ಕಾಣುತ್ತೀರುವ ಹೆಚ್.ಐ.ಜೆ.ಕೆ ಸ್ಥಳ

ಪ್ರತಿವಾದಿಯರದ್ದು ಎಂದರೆ ಸಾಕ್ಷಿ ಅದು ತಪ್ಪು ಇರುತ್ತದೆ ಎನ್ನುತ್ತಾರೆ. ವಾದಿಯ ಮನೆ ದಕ್ಷಿಣಕ್ಕೆ ಮುಖಮಾಡಿ ಇರುತ್ತದೆ ಎಂದರೆ ಸರಿ. ದಕ್ಷಿಣಕ್ಕೆ ಬಾಗಿಲು ಇದೆ ಎಂದರೆ ಸರಿ. ಪೂರ್ವಕ್ಕೆ 3 ಕಿಟಕಿಗಳು ಇವೆ ಎಂದರೆ ಸಾಕ್ಷಿ 2 ಕಿಟಕಿಗಳು ಇವೆ ಎನ್ನುತ್ತಾರೆ. ಸದರಿ ನಕ್ಷೆಯಲ್ಲಿ ಕಾಣುವ ಕ್ಯೂ.ಎಂ.ಪಿ.ಓ.ಎನ.ಆರ್.ವಿ.ಜೆ.ಕೆ.ಹೆಚ್.ಕ್ಯೂ. ಪ್ರತಿವಾದಿಯರ ಸ್ವತ್ತು ಎಂದರೆ ಸರಿಯಲ್ಲಾ. 2 ನೇ ಪ್ರತಿವಾದಿಯರು ಸದರಿ ಸ್ಥಳದಲ್ಲಿ ವಾಸವಿದ್ದಾರಾ ಎಂದರೆ ಸಾಕ್ಷಿ ಮಗಳು ವಾಸ ಇದ್ದಾರೆ ಎನ್ನುತ್ತಾರೆ. ಸದರಿ ಆಸ್ತಿ ನಂಬರ 844 ಎಂದರೆ ಸರಿ. 844 ರಲ್ಲಿ ಪ್ರತಿವಾದಿ ಮನೆ ಕಂಪೌಂಡ ಕಟ್ಟಿಕ್ಕೊಂಡಿರುತ್ತಾರೆ ಎಂದರೆ ಸಾಕ್ಷಿ ನಮ್ಮದರಲ್ಲಿ ಅತೀ ಕ್ರಮಣ ಮಾಡಿರುತ್ತಾರೆ ಎನ್ನುತ್ತಾರೆ. ಸದರಿ ರೀತಿ ಸುಳ್ಳು ಹೇಳುತ್ತೀದ್ದಿರಿ ಅಂದರೆ ಸರಿಯಲ್ಲಾ.

ನೀವು ಹಾಜರುಪಡಿಸಿದ ಕಚ್ಚಾ ನಕ್ಷೆಯಲ್ಲಿ ನಂಬರ ಏನು ಬರೆದಿರುತ್ತೀರಿ ಎಂದರೆ ಸಾಕ್ಷಿ 857 ಬಿ ಎಂದು ಬರೆದಿರುತ್ತಾರೆ. ನಾನು ಕಚ್ಚಾನಕಾಶೆಯಲ್ಲಿ 2 ಕಿಟಕಿಯನ್ನು ತೋರಿಸಿರುತ್ತೇನೆ. ನಿಮ್ಮ ವಾದ ಪತ್ರದಲ್ಲಿ ಕಿಟಕಿ ಇದ್ದ ಬಗ್ಗೆ ವಿವರಣೆ ನೀಡಿಲ್ಲಾ ಎಂದರೆ ಸರಿ. ಕಿಟಕಿ ಇದ್ದ ಬಗ್ಗೆ ವಿವರಣೆ ನೀಡಿದರೆ ನಿಮಗೆ ತೊಂದರೆ ಆಗುತ್ತದೆ ಎಂದು ಹೇಳಿಲ್ಲಾ ಅಂದರೆ ಸರಿಯಲ್ಲಾ. ಸಾಕ್ಷಿ ಮುಂದುವರೆದು ಕಿಟಕಿ ಹಚ್ಚ ಬೇಡಿರಿ ಎಂದು ನಾವು ಹರಕತ್ ಮಾಡಿದೇವು ಅವರು ಹಚ್ಚಿರುತ್ತಾರೆ ಎನ್ನುತ್ತಾರೆ. ಸದರಿ ವಿಷಯವನ್ನು ವಾದಪತ್ರದಲ್ಲಿ ಬರೆಸಿರುವುದಿಲ್ಲಾ. ನೀವು ಕಿಟಕಿ ಹಚ್ಚ ಬೇಡಿರಿ ಎಂದು ಪೊಲೀಸರಿಗೆ ಹಾಗೂ ಗ್ರಾಮ ಪಂಚಾಯತಿಗೆ ತಕರಾರು ನೀಡಿದ್ದಿರಾ ಎಂದರೆ ಸಾಕ್ಷಿ ಪೊಲೀಸರು ತೆಗೆದುಕೊಳ್ಳಲಿಲ್ಲಾ ಗ್ರಾಮ ಪಂಚಾಯತಿಗೆ ಅರ್ಜಿ ನೀಡಿಲ್ಲಾ ಎನ್ನುತ್ತಾರೆ. ಪೊಲೀಸರು ದೂರು ತೆಗೆದುಕೊಳ್ಳಲಿಲ್ಲಾ ಎಂದು ಖಾಸಗಿ ದೂರು ಆಗಲಿ ಅಥವಾ ಎಸ ಪಿ ರವರಿಗೆ ಅರ್ಜಿ ನೀಡಿದ್ದಿರಾ ಎಂದರೆ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎನ್ನುತ್ತಾರೆ. 2017

ರಲ್ಲಿ ಪ್ರತಿವಾದಿಗಳು ಮನೆ ಕಟ್ಟಿರುತ್ತಾರೆ. ಸದರಿ ರೀತಿ ಸುಳ್ಳು ಹೇಳುತ್ತೀದ್ದೇನೆ ಅಂದರೆ ಸರಿಯಲ್ಲಾ. ನೀವು ಹಾಜರುಪಡಿಸಿರುವ ನಿಪಿ-08 ರಿಂದ 11 ರಲ್ಲಿಯೂ ಸಹ ಪ್ರತಿವಾದಿ ಕಾಂಪೌಂಡ ಕಟ್ಟುತ್ತಿದ್ದಾನೆ ಎಂದು ಉಲ್ಲೇಖ ಇರುವುದಿಲ್ಲಾ ಎಂದರೆ ಸರಿ. ಪ್ರತಿವಾದಿ ತನ್ನ ಸ್ವತ್ತು 844 ರಲ್ಲಿ ಕಾಂಪೌಂಡ ನಿರ್ಮಿಸಿದ್ದರಿಂದ ನೀವು ಬರೆದಿರುವುದಿಲ್ಲಾ ಎಂದರೆ ಸರಿಯಲ್ಲಾ. ನಿಪಿ-13 ರಿಂದ 16 ಪೋಟೋಗಳಲ್ಲಿ ಕಾಣುತ್ತೀರುವ ಕಟ್ಟಡ 844 ಕಟ್ಟಿರುವುದು ಎಂದರೆ ಸರಿಯಲ್ಲಾ. ನಿಪಿ-13 ರಿಂದ 16 ನಿಮ್ಮ ಸ್ವತ್ತಿನಲ್ಲಿ ಅತೀ ಕ್ರಮಣ ಮಾಡಿದ್ದಾರೆ ಎಂದರೆ ತೋರಿಸುವುದಿಲ್ಲಾ ಅಂದರೆ ಸರಿಯಲ್ಲಾ. ಕಿಟಕಿ ಬರುವ ಹಾಗೇ ಪೋಟೋ ತೆಗೆದಿಲ್ಲಾ ಅಂದರೆ ಕಿಟಕಿ ಹಿಂದಿನಿಂದ ಹಚ್ಚಿಕೊಂಡಿರುತ್ತಾರೆ ಎನ್ನುತ್ತಾರೆ. ನಿಪಿ-15 ಮತ್ತು 16 ರಲ್ಲಿ ಕಿಟಕಿ ಕಾಣುತ್ತದೆ ಎಂದರೆ ಏನೋ ಮಾಡಿರಬಹುದು ಎನ್ನುತ್ತಾರೆ. ನೀವು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತೀದ್ದಿರಿ ಅಂದರೆ ಸರಿಯಲ್ಲಾ. ಪ್ರತಿವಾದಿ ತನ್ನ ಸ್ವತ್ತಿನಲ್ಲಿ ಕಂಪೌಂಡ, ಶೌಚಾಲಯ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲಾ. ಪ್ರತಿವಾದಿ ಯಾವುದೇ ಸ್ವತ್ತನ್ನು ಅತೀ ಕ್ರಮಣ ಮಾಡಿರುವುದಿಲ್ಲಾ ಅಂದರೆ ಸರಿಯಲ್ಲಾ. ಪ್ರತಿವಾದಿಗೆ ಕಿರುಕುಳ ನೀಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತೀದ್ದೆನೆ ಅಂದರೆ ಸರಿಯಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.